


- ಯಾವುದೇ ತರಹದ ಮುಜುಗರ
- ತಲೆ ತಿರುಗುವುದು
- ಕಿವಿಯಲ್ಲಿ ಗುಂಯ್‌ಗುಟ್ಟುವುದು
- ಕುಟುಂಬದಲ್ಲಿ ಯಾರಿಗಾದರು ಶ್ರವಣದೋಷವಿರುವುದು.

ನಿಮಗೇನಾದರು, ಈ ಕೆಳಕಂಡ ಸೂಚನೆ ಮತ್ತು ಶ್ರವಣ ದೋಷದ ಲಕ್ಷಣಗಳು ಕಾಣಿಸಿಕೊಂಡಲ್ಲಿ ಕೂಡಲೇ ಶ್ರವಣತಜ್ಞರನ್ನು/ ಇ.ಎನ್.ಟಿ ವೈದ್ಯರನ್ನು ಸಂಪರ್ಕಿಸಿರಿ.

- ಸ್ಪಷ್ಟವಿಲ್ಲದ ವಾಕ್ ಮತ್ತು ಇನ್ನಿತರ ಶಬ್ದಗಳು
- ಪದಗಳನ್ನು ಅರ್ಥ ಮಾಡಿಕೊಳ್ಳಲು ಕಷ್ಟವಾದಲ್ಲಿ ಮುಖ್ಯವಾಗಿ ಹಿನ್ನೆಲೆಯಲ್ಲಿ ಗದ್ದಲವಿರುವಾಗ ಅಥವಾ ಗುಂಪಿನಲ್ಲಿರುವಾಗ
- ಇತರರನ್ನು ನಿಧಾನವಾಗಿ, ಸ್ಪಷ್ಟವಾಗಿ ಮತ್ತು ಜೋರಾಗಿ ಮಾತನಾಡಲು ಕೇಳುವುದು.
- ಟಿ. ವಿ. ಅಥವಾ ರೇಡಿಯೋವನ್ನು ಹೆಚ್ಚಿನ ಶಬ್ದಮಟ್ಟದಲ್ಲಿ ಉಪಯೋಗಿಸುವ ಅಣತ್ಯ.
- ಸಂಭಾಷಣೆಗಲ್ಲಿ ಆಸಕ್ತಿ ಇಲ್ಲದಿರುವುದು
- ಜನರಿಂದ ದೂರವಿರುವುದು
- ಕಿವಿಯಲ್ಲಿ ಶಬ್ದ ಬರುವುದು (ಟಿನ್ನೈಟಸ್)

ಇವೆಲ್ಲಾ ಇಲ್ಲವಾದರೂ, ನಿಮ್ಮ ಶ್ರವಣಶಕ್ತಿ ಸಹಜವಾಗಿದೆಯೆಂದು ಖಾತ್ರಿಪಡಿಸಿಕೊಳ್ಳಲು ನಿಮ್ಮ ಶ್ರವಣಶಕ್ತಿಯನ್ನು ನಿಯಮಿತವಾಗಿ ಪರೀಕ್ಷಿಸಿಕೊಳ್ಳಿ.

**ನೆನಪಿಡಿ, ತಡೆಗಟ್ಟುವುದು ಎಂದಿಗೂ ಚಿಕಿತ್ಸೆಗಿಂತಲೂ ಉತ್ತಮ**

**ನಿಮ್ಮಲ್ಲಿ ಯಾವುದೇ ಪ್ರಶ್ನೆಗಳು/ ಸಲಹೆಗಳಿದ್ದಲ್ಲಿ ಅಥವಾ ಯಾವುದೇ ಸಹಕಾರ ಬೇಕಿದ್ದಲ್ಲಿ ನಮ್ಮನ್ನು ಸಂಪರ್ಕಿಸಿ.**


**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**
ಮಾನಸಗಂಗೋತ್ರಿ, ಮೈಸೂರು 570 006
**ದೂರವಾಣಿ** : 0821 2514449 / 2514618
**ಫ್ಯಾಕ್ಸ್** : 0821 2510515
**ಇ ಮೇಲ್** : aiish_dir@yahoo.com


**ಕೆಲಸದ ವೇಳೆ** : ಬೆಳಗ್ಗೆ 9-00 ರಿಂದ ಸಂಜೆ 5-30 ರವರೆಗೆ
ಸೋಮವಾರದಿಂದ - ಶುಕ್ರವಾರದವರೆಗೆ
(ಕೇಂದ್ರ ಸರ್ಕಾರದ ರಜಾ ದಿನಗಳನ್ನು ಹೊರತುಪಡಿಸಿ)



# ಶ್ರವಣಹಾನಿ ತಡೆಗಟ್ಟುವಿಕೆ



**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**
ಮಾನಸಗಂಗೋತ್ರಿ, ಮೈಸೂರು - 570 006

## ಶ್ರವಣಹಾನಿ ತಡೆಗಟ್ಟುವಿಕೆ

ಶ್ರವಣೇಂದ್ರಿಯವು ವ್ಯವಹರಿಸಲು ಒಂದು ಮುಖ್ಯವಾದ ಇಂದ್ರಿಯವಾಗಿದೆ. ಶ್ರವಣಶಕ್ತಿಯಿಂದ ಕಲಿಕೆಯ ಬಹುಭಾಗವು ನಡೆಯುತ್ತದೆ. ಆದ್ದರಿಂದ ಮನುಷ್ಯರ ಶ್ರವಣಶಕ್ತಿಯ ಕುಗ್ಗುವಿಕೆಯಿಂದ ಅವನ/ಅವಳ ಜೀವನದ ಮೇಲೆ ಭಾರಿ ಕೆಟ್ಟಪ್ರಭಾವವನ್ನು ಬೀರುತ್ತದೆ. ಶ್ರವಣದೋಷವು ಹಲವಾರು ಕಾರಣಗಳಿಂದ ಉಂಟಾಗುತ್ತದೆ. ಕೆಲವು ಹುಟ್ಟುವ ಮೊದಲು, ಹಾಗೂ ಇನ್ನು ಕೆಲವು ನಂತರದ ದಿನಗಳಲ್ಲಿ. ಶ್ರವಣದೋಷವು ವಂಶ ಪಾರಂಪರ್ಯವಾಗಿಯೂ ಬರಬಹುದು. ಆದರೆ ಹಲವು ಸಂದರ್ಭಗಳಲ್ಲಿ ಶ್ರವಣ ಹಾನಿಯನ್ನು ತಡೆಗಟ್ಟಬಹುದು. ಇಲ್ಲಿ ನೀವು ನಿಮ್ಮ ಶ್ರವಣಶಕ್ತಿಯನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂದು ತಿಳಿಸುವ ಕೆಲವು ಮುಖ್ಯಾಂಶಗಳಿವೆ.

**ಚೂಪಾದ ವಸ್ತುಗಳಿಂದ ನಿಮ್ಮ ಕಿವಿಗಳನ್ನು ಶುಚಿಗೊಳಿಸಬಾರದು:**

ಪಿನ್ನು, ಪೆನ್ಸಿಲ್, ಸೂಜಿ ಹಾಗೂ ಇನ್ನಿತರ ಚೂಪಾದ ವಸ್ತುಗಳಿಂದ ನಿಮ್ಮ ಕಿವಿಯನ್ನು ಸ್ವಚ್ಛಮಾಡುವುದರಿಂದ ಕಿವಿಯ ನಾಳದ ಗೋಡೆ ಅಥವಾ ಕಿವಿಯ ತಮಟೆಗೆ ಹಾನಿಯುಂಟಾಗುತ್ತದೆ. ಇದರಿಂದ ಶ್ರವಣ ದೋಷವುಂಟಾಗುತ್ತದೆ. ಕಿವಿಯಲ್ಲಿನ ಗುಗ್ಗೆಯು ತಾನಾಗಿಯೇ ಕಿವಿಯಿಂದ ಹೊರಬರುವುದು. ಕೆಲವೊಮ್ಮೆ ಗಟ್ಟಿಯಾದ ಗುಗ್ಗೆ ಅಥವಾ ಅತಿಯಾದ ಗುಗ್ಗೆಯು ನಿಮ್ಮ ಕಿವಿಯಲ್ಲಿದ್ದಲ್ಲಿ, ನೀವು ನಿಮ್ಮ ಕಿವಿಗಳನ್ನು ಸ್ವಚ್ಛಗೊಳಿಸಲು ಕಿವಿ ಮೂಗು ಗಂಟಲು ತಜ್ಞರ ಬಳಿ ಹೋಗಬೇಕಾಗುತ್ತದೆ.



**ಯಾವುದೇ ತರಹದ ವಸ್ತುಗಳನ್ನು ಕಿವಿಯ ನಾಳಕ್ಕೆ ಹಾಕಬಾರದು:**

ಮಕ್ಕಳು ಆಟವಾಡುವಾಗ ತಮ್ಮ ಕಿವಿಯ ನಾಳಕ್ಕೆ ಬೀಜ, ಕಾಳು, ಸಣ್ಣ ಸಣ್ಣ ಕಲ್ಲುಗಳು, ಮಣ್ಣು ಮುಂತಾದವುಗಳನ್ನು ಹಾಕಿಕೊಳ್ಳಬಹುದು. ಹಾಗೆಯೇ ಹಿರಿಯರಲ್ಲಿ, ಸಾಮಾನ್ಯವಾಗಿ ಕೀಟಗಳು ಕಿವಿಗೆ ಹೋಗಬಹುದು. ಆ ಸಂದರ್ಭಗಳಲ್ಲಿ ಕೂಡಲೇ ಕಿವಿ ಮೂಗು ಗಂಟಲು ತಜ್ಞರ ಸಹಾಯ ಪಡೆಯಿರಿ. ಈ ಹೊರಗಿನ ವಸ್ತುಗಳು ಕಿವಿಯ ತಮಟೆಗೆ ಅಡ್ಡಿಯಾಗುತ್ತದೆ ಅಥವಾ ಕಿವಿ ತಮಟೆಗೆ ಹಾನಿಯುಂಟು ಮಾಡುತ್ತದೆ. ಇದರಿಂದ ಮಧ್ಯಮ ಮಟ್ಟದವರೆಗೂ ಶ್ರವಣಹಾನಿಯಾಗುತ್ತದೆ. ಕಿವಿಯೊಳಗೆ ನೀರನ್ನು ಹಾಕಬಾರದು, ಇದರಿಂದ ಸೋಂಕು ರೋಗ ಉಂಟಾಗಬಹುದು.



**ಕಿವಿ ನೋವು ಅಥವಾ ಕಿವಿ ಸೋರುವುದನ್ನು ಕಡೆಗಣಿಸಬಾರದು**

ಕಿವಿಯ ಸೋಂಕು ರೋಗಕ್ಕೆ ಚಿಕಿತ್ಸೆ ಪಡೆಯದಿದ್ದರೆ ಶ್ರವಣ ಹಾನಿಯಾಗಬಹುದು. ನಿಮಗೇನಾದರು ಈ ಕೆಳಕಂಡ ರೋಗ ಚಿಹ್ನೆ ಇದ್ದಲ್ಲಿ ಕೂಡಲೇ ಕಿವಿ ಮೂಗು ಗಂಟಲು ತಜ್ಞರನ್ನು ಸಂಪರ್ಕಿಸಿ:

- ಕಿವಿ ನೋವು
- ನವೆ/ಕೆರತ
- ಕಿವಿಯೊಳಗೆ ಶಬ್ದ ಬರುವುದು
- ಕಿವಿಯೊಳಗೆ ದ್ರವ/ಪ್ರವಾಹಿ ಪದಾರ್ಥ



**ಹೆಲ್ಮೆಟ್ ಧರಿಸಿ**


ರಸ್ತೆ ಅಪಘಾತಗಳಿಂದ ತಲೆಗೆ ಏನೇ ಪೆಟ್ಟಾದರು ಶ್ರವಣ ಹಾನಿಯಾಗಬಹುದು. ರಸ್ತೆ ಅಪಘಾತಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಲು ಹೆಲ್ಮೆಟ್ ಧರಿಸಿ, ನಿಮ್ಮ ತಲೆಗೆ ಮತ್ತು ಕಿವಿಗೆ ಆಗುವ ಪೆಟ್ಟುಗಳನ್ನು ತಡೆಗಟ್ಟಿ.



**ಗಲಾಟೆಯನ್ನು ತಡೆಗಟ್ಟುವುದು**


ಗದ್ದಲವನ್ನುಂಟು ಮಾಡುವ ವಸ್ತುಗಳ ಬಗ್ಗೆ ಅರಿವಿರಲಿ, ಜೋರಾದ ಮತ್ತು ತೀವ್ರಮಟ್ಟದ ಗದ್ದಲಕ್ಕೆ ಒಳಪಡುವುದು ಶ್ರವಣಹಾನಿಗೆ ಸಾಮಾನ್ಯ ಕಾರಣವಾಗಿದೆ. ಜೋರಾದ ಸಂಗೀತ, ಮದ್ದುಗುಂಡು, ಪಟಾಕಿಯ ಸಪ್ಪಳ ಮುಂತಾದುವುಗಳಿಂದ ನಿಮ್ಮ ಕಿವಿಯನ್ನು ರಕ್ಷಿಸಿ, ನೀವು ಕೆಲಸ ಮಾಡುವ ಸ್ಥಳದಲ್ಲಿ (ಗಿರಣಿ, ರಸ್ತೆ ಕಾಮಗಾರಿ, ಪ್ರಿಂಟಿಂಗ್ ಕೆಲಸ, ಕಾರ್ಖಾನೆ ಮುಂತಾದುವುಗಳು) ಅತಿಯಾದ ಗದ್ದಲವಿದ್ದರೆ ನೀವು ನಿಮ್ಮ ಶ್ರವಣಶಕ್ತಿಯನ್ನು ರಕ್ಷಿಸಲು ಕಿವಿಯ ರಕ್ಷಣಾ ಉಪಕರಣಗಳಾದ ' ಇಯರ್ ಪ್ಲಗ್' ಅಥವಾ 'ಇಯರ್ ಮಫ್' ಅನ್ನು ಧರಿಸಲೇ ಬೇಕು. ನಿಮ್ಮ ಶ್ರವಣತಜ್ಞರು ನಿಮಗೆ ಸೂಕ್ತವಾದ ರಕ್ಷಣೆಯ ಉಪಕರಣಗಳನ್ನು ಆರಿಸಿಕೊಳ್ಳಲು ಸಹಾಯ ಮಾಡುತ್ತಾರೆ.





**ವಿವೇಚನೆಯಿಲ್ಲದೆ ಮದ್ದುಗಳನ್ನು ಸ್ವೀಕರಿಸ ಬಾರದು**

ಆಂಟಿಬಯೋಟಿಕ್ಸ್ (ಉದಾ: ಸ್ಟ್ರೆಪ್ಟೋಮೈಸಿನ್, ಕೆನಮೈಸಿನ್. ಮತ್ತು ಜೆನ್‌ಟಾಮೈಸಿನ್) ಮತ್ತು ಅಸ್ಪಿರಿನ್‌ಗಳು ಶ್ರವಣ ಹಾನಿಯನ್ನು ಉಂಟುಮಾಡಬಹುದು. ನೀವೇನಾದರು ಇಂತಹ ಮದ್ದುಗಳನ್ನು ದೀರ್ಘ ಕಾಲದವರೆಗೆ ತೆಗೆದುಕೊಳ್ಳಬೇಕಾದರೆ, ನಿಮ್ಮ ಶ್ರವಣ ಶಕ್ತಿಯನ್ನು ನಿಯಮಿತವಾಗಿ ಪರೀಕ್ಷಿಸಿಕೊಳ್ಳಿ. ನಿಮಗೇನಾದರು ಶ್ರವಣ ಹಾನಿಯಾದಂತೆ ಭಾಸವಾದಲ್ಲಿ ನಿಮ್ಮ ವೈದ್ಯರೊಡನೆ ಸಂದರ್ಶಿಸಿ, ಔಷಧಿಯ ಪ್ರಮಾಣವನ್ನು ಕಡಿಮೆ ಮಾಡಿಬಹುದೇ ಅಥವಾ ಅದಕ್ಕೆ ಬದಲಾಗಿ ಬೇರೆ ಔಷಧವನ್ನು ಸ್ವೀಕರಿಸಬಹುದೇ ಎಂಬುದನ್ನು ತಿಳಿದುಕೊಳ್ಳಿ.



**ಹತ್ತಿರ ಸಂಬಂಧದ ಮದುವೆಗಳನ್ನು ಪ್ರೋತ್ಸಾಹಿಸದಿರಿ**

ಹತ್ತಿರ ಸಂಬಂಧದ ಮದುವೆ ಅಥವಾ ರಕ್ತ ಸಂಬಂಧದಲ್ಲಿ ಮದುವೆ ಆಗುವುದರಿಂದ ಶ್ರವಣದೋಷವಿರುವ ಮಗು ಹುಟ್ಟುವ ಸಾಧ್ಯತೆಗಳು ಹೆಚ್ಚು.

**ಗರ್ಭಿಣಿಯರಾಗಿರುವಾಗ ಆರೋಗ್ಯದ ಬಗ್ಗೆ ಕಾಳಜಿ ವಹಿಸಿರಿ**

ಸೋಂಕುರೋಗಗಳಾದ ಗದಗಟ್ಟು, ದಡಾರ, ಸಿಫಿಲಿಸ್ ಮತ್ತು ರುಬೆಲ್ಲದಿಂದ ಗರ್ಭಧಾರಣೆಯಲ್ಲಿ ಭ್ರೂಣಾವಸ್ಥೆಯಲ್ಲಿರುವ ಶಿಶುವಿನ ಶ್ರವಣಶಕ್ತಿಗೆ ಹಾನಿಯುಂಟಾಗಬಹುದು. ಎಕ್ಸ್‌ರೇ ಅಥವಾ ಅವಿಕಿರಣಗಳಿಗೆ ಒಳಗಾಗುವುದು, ಮದ್ದುಗಳನ್ನು ಗರ್ಭಧಾರಣೆಯಲ್ಲಿ ಸೇವಿಸುವುದು, ಬೀಳುವುದು ಮತ್ತು ಪೆಟ್ಟಾಗುವುದು ಇವುಗಳಿಂದ ಮಗುವಿನ ಶ್ರವಣಹಾನಿಯಾಗಬಹುದು. ಗರ್ಭಿಣಿ ಹೆಂಗಸರು ನಿಯಮಿತವಾಗಿ ತಮ್ಮ ವೈದ್ಯರನ್ನು ಸಂದರ್ಶಿಸಿ ಆಹಾರದ ಬಗ್ಗೆ, ಆರೋಗ್ಯದ ಬಗ್ಗೆ, ಲಸಿಕೆಗಳ ಬಗ್ಗೆ ಸಲಹೆ ಪಡೆಯಿರಿ. ಇನ್ನು ಹುಟ್ಟದೆ ಇರುವ ಮಗುವನ್ನು ಯಾವುದೇ ತರಹದ ಆರೋಗ್ಯದ ತೊಂದರೆಯಿಂದ ಮತ್ತು ಶ್ರವಣ ಹಾನಿಯಿಂದ ಸಂರಕ್ಷಿಸಲು ಇದು ಅಗತ್ಯ. ಆರ್.ಹೆಚ್ ಹೊಂದಿಕೆಯಿಲ್ಲದಿರುವುದರಿಂದಲೂ ಮಗುವಿಗೆ ಶ್ರವಣ ಹಾನಿ ಉಂಟಾಗ ಬಹುದು. ತಾಯಿಯ ರಕ್ತದ ಗುಂಪು ನೆಗೆಟಿವ್ ಮತ್ತು ಮಗುವಿನ ರಕ್ತದ ಗುಂಪು ಪಾಸಿಟಿವ್ ಆದಾಗ ಈ ಸ್ಥಿತಿಯುಂಟಾಗುತ್ತದೆ ( ಉದಾ: ತಾಯಿಯ ರಕ್ತದ ಗುಂಪು 'ಬಿ–' ಮತ್ತು ಮಗುವಿನ ರಕ್ತದ ಗುಂಪು ಬಿ+).




**ಕಿವಿಯ ಸೋಂಕುರೋಗವನ್ನು ತಡೆಗಟ್ಟಿ**

ನೀವು ಮಗುವಿಗೆ ಹಾಲುಣಿಸುವಾಗ ಮಗುವನ್ನು ಇಳಿಜಾರಿನ ರೀತಿಯಲ್ಲಿಟ್ಟುಕೊಳ್ಳಬೇಕು. ಇದು ಮಗುವನ್ನು ಕಿವಿಗಾಗುವ ಸೋಂಕು ರೋಗಗಳಿಂದ ತಡೆಗಟ್ಟುತ್ತದೆ. ಯಾವುದೇ ತರಹದ ಬಿಸಿ ಎಣ್ಣೆ ಅಥವಾ ಇನ್ನಿತರ ದ್ರವಗಳನ್ನು ಕಿವಿಯೊಳಗೆ ಹಾಕಬಾರದು. ಏಕೆಂದರೆ ಇದರಿಂದ ಕಿವಿ ನೋವು ಬರುತ್ತದೆ ಅಥವಾ ಕಿವಿ ಸೋರುತ್ತದೆ. ನೀವು ಈಜುವಾಗ ಅಥವಾ ನೀರಿನಲ್ಲಿ ಧುಮುಕುವಾಗ, ಇಯರ್ ಪ್ಲಗ್‌ಗಳನ್ನು ಉಪಯೋಗಿಸಿ ಇದರಿಂದ ನೀರು ಕಿವಿಯೊಳಗೆ ಹೋಗುವುದನ್ನು ತಡೆಗಟ್ಟಬಹುದು. ಕೊಳೆನೀರು ಕಿವಿಯಲ್ಲಿ ಸೋಂಕು ರೋಗವನ್ನು ಕೂಡ ಉಂಟು ಮಾಡಬಹುದು. ನೀವು ಮೂಗನ್ನು ಸ್ವಚ್ಛಗೊಳಿಸುವಾಗ, ನಿಧಾನವಾಗಿ ಮೆಲ್ಲಗೆ ಮೂಗಿನ ಎರಡೂ ಹೊಳ್ಳೆಗಳಿಂದಲು ಉಸಿರು ಬಿಡಿ. ಇಲ್ಲವಾದರೆ ಮೂಗಿನಲ್ಲಿರುವ ದ್ರವವು ಒತ್ತಡದಿಂದ ಕಿವಿಯ ಮಧ್ಯಭಾಗಕ್ಕೆ ಹೋಗುತ್ತದೆ, ಇದರಿಂದ ಸೋಂಕಾಗುತ್ತದೆ.



**ಲಸಿಕೆಗಳನ್ನು ಸರಿಯಾದ ಸಮಯಕ್ಕೆ ಸ್ವೀಕರಿಸಿರಿ.**

ದಡಾರ, ಎನ್ಸೆಫೈಲೈಟಿಸ್, ಗದಗಟ್ಟು, ರುಬೆಲ್ಲ, ಮೆನಿನ್‌ಜೈಟಿಸ್, ವಿಷಮ ಜ್ವರ ಮುಂತಾದವುಗಳು ಶ್ರವಣ ಹಾನಿಯನ್ನುಂಟು ಮಾಡಬಹುದು. ಸಾಧ್ಯವಾದಷ್ಟು ಇಂತಹ ರೋಗಗಳನ್ನು ತಡೆಗಟ್ಟಿ ಮತ್ತು ಮಕ್ಕಳಿಗೆ ಸರಿಯಾದ ಸಮಯಕ್ಕೆ ಲಸಿಕೆಯನ್ನು ಕೊಡಿಸಿ, ನಿಮಗೇನಾದರೂ ಈ ಕಾಯಿಲೆ ಕಾಣಿಸಿಕೊಂಡಲ್ಲಿ, ನೀವು ಶ್ರವಣ ತಜ್ಞರಿಂದ ಸಲಹೆ ಪಡೆಯಿರಿ.



**ನಿಮ್ಮ ಶ್ರವಣಶಕ್ತಿಯನ್ನು ನಿಯಮಿತವಾಗಿ ಪರೀಕ್ಷಿಸಿಕೊಳ್ಳಿ**

ನಿಮ್ಮ ಶ್ರವಣತಜ್ಞರೊಡನೆ ಸಂಪರ್ಕವಿಟ್ಟುಕೊಳ್ಳಿ. ನಿಮಗೆ ಕೇಳುವುದರಲ್ಲಿ ಕಷ್ಟವಾದಲ್ಲಿ ಅಥವಾ ಒಂದು ಕಿವಿ ಮತ್ತೊಂದಕ್ಕಿಂತ ಉತ್ತಮವಾಗಿ ಕೇಳಿಸುತ್ತಿದೆ ಎಂದು ತಿಳಿದ ಕೂಡಲೇ ನಿಮ್ಮ ಶ್ರವಣಶಕ್ತಿಯನ್ನು ಪರೀಕ್ಷಿಸಿಕೊಳ್ಳಿ. ಹಾಗೂ ಈ ವಿಷಯದ ಬಗ್ಗೆ ಶ್ರವಣ ತಜ್ಞರನ್ನು ವಿಚಾರಿಸಿ.